# ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)

# Krishna Bhagya Jala Nigam Limited
(A Government of Karnataka Undertaking)


ಕೃಭಾಜನಿನಿ/ಆಡಳಿತ/ಎಂ-107/2011-12/979 ದಿನಾಂಕ 19.11.2011

## ಸುತ್ತೋಲೆ

**ವಿಷಯ: ನಿಗಮದ ಯೋಜನಾ ಪ್ರದೇಶದಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿಗಳು ತಮ್ಮ ಕೇಂದ್ರ ಸ್ಥಾನದಲ್ಲಿ ಲಭ್ಯವಿರುವ ಹಾಗೂ ಮೊಬೈಲ್ (Mobile) ದೂರವಾಣಿಯನ್ನು ಚಾಲನೆಯಲ್ಲಿ ಇಡುವ ಕುರಿತು**

<<<>>>

ನಿಗಮದ ಯೋಜನಾ ಪ್ರದೇಶದಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿಗಳು ಬಹಳಷ್ಟು ಸಂದರ್ಭದಲ್ಲಿ ತಮ್ಮ ಕಾರ್ಯಸ್ಥಳವನ್ನು ಬಿಟ್ಟು ತೆರಳುತ್ತಿರುವುದರಿಂದ ಸಾರ್ವಜನಿಕರು ಹಾಗೂ ರೈತರ ಸಮಸ್ಯೆಗಳನ್ನು ಅಧಿಕಾರಿಗಳ ಗಮನಕ್ಕೆ ತರಲು ಸಾಧ್ಯವಾಗುತ್ತಿಲ್ಲವೆಂದು ಹಾಗೂ ನಿಗಮವು ಒದಗಿಸಿರುವ ದೂರವಾಣಿ (Mobile) ಗಳನ್ನು ಚಾಲನೆಯಲ್ಲಿ ಇಡದೆ ಇರುವುದರಿಂದ (switchoff) ತುಂಬಾ ಅನಾನುಕೂಲವಾಗುತ್ತಿರುವ ವಿಷಯವನ್ನು ಗಂಭೀರವಾಗಿ ಪರಿಗಣಿಸಲಾಗಿದೆ. ಅಲ್ಲದೆ ಈ ಕಛೇರಿಯಿಂದಲು ಸಹ ಮೇಲಾಧಿಕಾರಿಗಳು ಯೋಜನಾ ಪ್ರದೇಶದ ಅಧಿಕಾರಿಗಳನ್ನು ಮಾಹಿತಿಗಾಗಿ ಸಂಪರ್ಕಿಸಲು ಪ್ರಯತ್ನಿಸಿದಾಗ ದೂರವಾಣಿಗಳು (Mobile) ಚಾಲನೆಯಲ್ಲಿರದೆ ಇರುವುದು ಕಂಡು ಬಂದಿದೆ. ಅದರಿಂದ ಯೋಜನಾ ಪ್ರದೇಶದಲ್ಲಿ ಕಾರ್ಯನಿರ್ವಹಿಸುತ್ತಿರುವ ಸಹಾಯಕ ಅಭಿಯಂತರರು, ಸಹಾಯಕ ಕಾರ್ಯಪಾಲಕ ಅಭಿಯಂತರರು, ಕಾರ್ಯಪಾಲಕ ಅಭಿಯಂತರರು, ಅಧೀಕ್ಷಕ ಅಭಿಯಂತರರು ಮತ್ತು ಮುಖ್ಯ ಅಭಿಯಂತರರು ಈ ಕಛೇರಿಯಿಂದ ಪೂರ್ವಾನುಮತಿ ಇಲ್ಲದೆ ತಮ್ಮ ತಮ್ಮ ಕೇಂದ್ರ ಸ್ಥಳಗಳನ್ನು ಬಿಟ್ಟು ತೆರಳಬಾರದೆಂದು ಈ ಮೂಲಕ ತಿಳಿಸಲಾಗಿದೆ. ಹಾಗೂ ನಿಗಮವು ಒದಗಿಸಿರುವ ಮೊಬೈಲ್ ದೂರವಾಣಿಗಳನ್ನು ದಿನದ 24 ಗಂಟೆಯು ಕಡ್ಡಾಯವಾಗಿ ಚಾಲನೆಯಲ್ಲಿ ಇಡಲು ಸಹ ನಿರ್ದೇಶಿಸಿದೆ. ಈ ಸುತ್ತೋಲೆಯಲ್ಲಿನ ನಿರ್ದೇಶನಗಳನ್ನು ಪಾಲಿಸಲು ನಿರ್ಲಕ್ಷ ತೋರುವ ಅಧಿಕಾರಿಗಳ ವಿರುದ್ಧ ಶಿಸ್ತುಕ್ರಮ ಜರುಗಿಸಲಾಗುವುದು ಎಂದು ಈ ಮೂಲಕ ಸ್ವಸ್ಟಪಡಿಸಲಾಗಿದೆ. ಅಲ್ಲದೆ ಅನುಮತಿ ಇಲ್ಲದೆ ಯಾವುದ ಅಧಿಕಾರಿ / ಸಿಬ್ಬಂದಿಯವರು ಕೇಂದ್ರಸ್ಥಾನ ಬಿಟ್ಟಿದಲ್ಲಿ ಸಂಬಂಧಪಟ್ಟ ಮೇಲಾಧಿಕಾರಿಗಳನ್ನು ಸಹ ಜವಾಬ್ದಾರರನ್ನಾಗಿ ಮಾಡಲಾಗುವುದು.

----- 2

ಮುಂದುವರಿದು ಕಛೇರಿಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿ/ಸಿಬ್ಬಂದಿಗಳ ಕಾರ್ಯ ನಿಮಿತ್ತ ಕಛೇರಿಯಿಂದ ಹೊರಗೆ ಹೋಗುವಾಗ ಸಂಬಂಧಪಟ್ಟ ಮೇಲಾಧಿಕಾರಿಗಳ ಅನುಮತಿಯನ್ನು ಪಡೆದು ತೆರಳಬೇಕು ಹಾಗೂ ವಿವರಗಳನ್ನು (Movement Register) ಚಲನ ವಲನ ಪುಸ್ತಕದಲ್ಲಿ ನಮೂದಿಸಬೇಕು. ಈ ಕುರಿತು ಕಛೇರಿಯ ಮುಖ್ಯಸ್ಥರು ಅಗತ್ಯ ಕ್ರಮ ಕೈಗೊಂಡು (Movement Register) ಜಲನ ವಲನ ಪುಸ್ತಕದಲ್ಲಿ ಪ್ರತಿ ದಿನ ಪರಿಶೀಲಿಸಿ ಷರಾವನ್ನು ಬರೆಯಲು ತಿಳಿಸಲಾಗಿದೆ.

ಪ್ರಧಾನ ವ್ಯವಸ್ಥಾಪಕರು (ಆಡಳಿತ)
ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ

ಪ್ರತಿ: ಕೆಳಕಂಡವರಿಗೆ ಮಾಹಿತಿಗಾಗಿ ಹಾಗೂ ಅಧೀನ ಕಛೇರಿಗೆ ಅಗತ್ಯ ನಿರ್ದೇಶನ ನೀಡುವಂತೆ ತಿಳಿಸಲಾಗಿದೆ.

1) ಮುಖ್ಯ ಅಭಿಯಂತರರು, ಕೃಭಾಜನಿನಿ (1) ಅಣೆಕಟ್ಟು ವಲಯ, ಆಲಮಟ್ಟಿ, (2) ಕಾಲುವೆ ವಲಯ ಸಂ.1, ಭೀಮರಾಯನಗುಡಿ (3) ಕಾಲುವೆ ವಲಯ ಸಂ.2, ರಾಂಪುರ, (4) ಕಾರ್ಯಾಚರಣೆ ಮತ್ತು ಪೋಷಣೆ ವಲಯ, ನಾರಾಯಣಪುರ
2) ಅಧೀಕ್ಷಕ ಅಭಿಯಂತರರು, ಕೃಭಾಜನಿನಿ, ಗುಣ ನಿಯಂತ್ರಣ (ವಿ) ಭೀಮರಾಯನಗುಡಿ
3) ಪ್ರಧಾನ ಮುಖ್ಯ ಲೆಕ್ಕಾಧಿಕಾರಿಗಳು, ಕೃಭಾಜನಿನಿ, ಆಲಮಟ್ಟಿ
4) ಮುಖ್ಯ ಲೆಕ್ಕಾಧಿಕಾರಿಗಳು, ಕೃಭಾಜನಿನಿ ಕಾಲುವೆಗಳು, ಭೀಮರಾಯನಗುಡಿ
5) ನಿಬಂಧಕರು, ಕೃಭಾಜನಿನಿ ಆಡಳಿತ ಕಛೇರಿ, ಆಲಮಟ್ಟಿ
6) [illegible]